SRI N. HUTCHMASTHY GOWDA (Minister for Revenue).—

(*a*) Shri Goduraya Mutt and Shri Gosai Mutt are under the control of Muzrai Department. There are no Mathadipathis for these two Mutts. Goduraya Mutt has a vacant site measuring about 30′×30′ which has been leased out.

(*b*) No.

ಶ್ರೀ ಎಂ ಬಿ. ರಾಮಸ್ವಾಮಿ.—ನನ್ನ ಪ್ರಶ್ನೆಯ (ಬಿ) ಭಾಗಕ್ಕೆ ಇಲ್ಲ ಎಂದು ತಿಳಿಸಿದ್ದೀರಿ. ಬಸಪ್ಪ ಸರ್ಕಲ್ ಹತ್ತಿರ ಶ್ರೀ ರಾಮಲಿಂಗೇಶ್ವರ ದೇವಸ್ಥಾನ ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು ಮತ್ತು ಅಲ್ಲಿರತಕ್ಕ ಜಮೀನನ್ನು ಜನಗಳು ಅಕ್ರಮವಾಗಿ ಸ್ವಾಧೀನ ಮಾಡಿಕೊಂಡಿದ್ದಾರೆ. ಈ ಜಮೀನನ್ನು ಬಹಳ ದಿವಸಗಳಿಂದ ಬಡವರಿಗೆ ಕೊಡಬೇಕು ಎನ್ನುವ ವಿಷಯ ಸರ್ಕಾರದಲ್ಲಿ ಪೆಂಡಿಂಗ್ ಇದೆ. ದಯಮಾಡಿ ಈ ಜಮೀನನ್ನು ಅಕ್ರಮವಾಗಿ ಸ್ವಾಧೀನ ಯಾರು ಮಾಡಿಕೊಂಡಿದ್ದಾರೋ ಅಂಥವರನ್ನು ತಪ್ಪಿಸಿ ಇದನ್ನು ಆ ಮಠಕ್ಕಾದರೂ ಉಳಿಸಿ ಅಥವಾ ಬಡವರಿಗೆ ಸೈಟು ಕೊಡತಕ್ಕ ಯೋಚನೆಯನ್ನಾದರೂ ಮಾಡಿ ಇದರ ಬಗ್ಗೆ ನಮಗೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಈ ಬಗ್ಗೆ ಏನು ಒಂದು ಪ್ರಶ್ನೆಯನ್ನು ಕಳುಹಿಸಿದ್ದರೋ ಅದಕ್ಕೆ ಸರಿಯಾಗಿ ಉತ್ತರವನ್ನು ಕಳುಹಿಸಿದ್ದೇನೆ. ನಾನು ಹೇಳಿರುವುದು ಏನೆಂದರೆ ಗೋದುರಾಯ ಮಠ ಮತ್ತು ಗೋಸಾಯಿ ಮಠಗಳು ಮಾತ್ರ ಈ ಮುಜರಾಯಿ ಇಲಾಖೆಯವರ ಅಧೀನದಲ್ಲಿದೆ ಎಂದು ಹೇಳಿದ್ದೇನೆ. ಆದರೆ ಅವರು ಈಗ ಹೇಳಿದಂಥಾ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದೆಯೇ ಇಲ್ಲವೋ ನೋಡೋಣ ಅದು ಮುಜರಾಯಿ ಇಲಾಖೆಗೆ ಸೇರಿದ್ದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಅದು ಸಿಟಿ ಮುನಿಸಿಪಲ್ ಲಿಮಿಟಿಗೆ ಬರುವುದಾದರೆ ಅದಕ್ಕೆ ಬೇರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಬಿ. ರಾಮಸ್ವಾಮಿ.—(ಆ) ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಆದರೆ ಅದು ಮುಜರಾಯಿ ಕಂಟ್ರೋಲ್‌ನಲ್ಲಿ ಇದ್ದರೂ ಕೂಡ ನೇರವಾಗಿ ಆ ಜನ ಅದನ್ನು ಅವರ ಸ್ವತ್ತನ್ನಾಗಿ ಬಳಸಿಕೊಂಡಿದ್ದಾರೆ. ಮತ್ತು ಈ ಗೋದರಾಯ ಮಠವು ಸುಮಾರು 30 30 ಖಾಲಿ ನಿವೇಶನವನ್ನು ಹೊಂದಿದ್ದು ಅದನ್ನು ಬಾಡಿಗೆಗೆ ಕೊಡಲಾಗಿದೆ ಅಂತ ಹೇಳಿದ್ದೀರಿ. ಈ ನಿವೇಶನವನ್ನು ಯಾರಿಗೆ ಕೊಟ್ಟಿದ್ದೀರಿ, ಎಷ್ಟು ವರ್ಷದವರೆಗೆ ಲೀಸ್ ಕೊಟ್ಟಿದ್ದೀರಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಜಾಗವನ್ನು ಖುಲ್ಲಾ ಮಾಡಬೇಕು ಎಂದು ಅವರಿಗೆ ಈಗಾಗಲೇ ನೋಟೀಸ್ ಕೊಟ್ಟಿದೆ. ಈಗ ಅದು ಸಿವಿಲ್ ಕೋರ್ಟ್‌ನಲ್ಲಿ ಇದೆ. ಅದಕ್ಕೆ ಈಗ ಸ್ಟೇ ಆರ್ಡರ್ ತಂದಿದ್ದಾರೆ. ಈವಾಗ ಇದು ಈ ಸ್ಥಿತಿಯಲ್ಲಿದೆ.

## Minor Irrigation Works in Shimog Circle.

302. SRI KAGODU THIMMAPPA (Sagar) —Will the Minister of State for Minor Irrigation and Protocol be pleased to state:—

(*a*) the amount provided during 1976-77 for Minor Irrigation in each of the taluks of Shimoga Circle;

(*b*) the amount of expenditure incurred up to the end of February, 1977 out of the amount provided ;

(*c*) the number of Minor Irrigation Works in Shimoga Circle included in the Budget for 1976-77 in each Taluk, out of this, the number of works for which estimates are not sanctioned and the number of works not started (the details of each Taluk)

(*d*) whether it has come to the notice of the Government that the Minor Irrigation Division of Shimoga is not working satisfactorily?

SRI H.C. SRIKANTAIAH (Minister of State for Minor Irrigation and Protocol).—

(*a*) The details are given in Statement I placed on the Table of the House *

(*b*) The details are given in Statement I placed on the Table of the House *

(*c*) The details are given in Statement I placed on the Table of the House *

(*d*) No.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ಈ ಸ್ಟೇಟ್‌ಮೆಂಟ್‌ನ ಎರಡರಲ್ಲಿ ತಾವು ಕೊಟ್ಟಿರುವ ಪ್ರಕಾರ ಶಿವಮೊಗ್ಗಾ ಡ್ರಿಸ್ಟ್ರಿಕ್ಟ್‌ನಲ್ಲಿ ಸುಮಾರು 11 ಕೆಲಸಗಳಿಗೆ ಅಂದಾಜು ಆಗಿಲ್ಲ ಮತ್ತು 10 ಕೆಲಸಗಳು ಇನ್ನೂ ಪ್ರಾರಂಭವಾಗಿಲ್ಲಾ. ಹಾಗೆಯೇ ಚಿತ್ರದುರ್ಗ ಜಿಲ್ಲೆ ತೆಗೆದುಕೊಂಡರೆ 20 ಕೆಲಸಗಳಿಗೆ ಅಂದಾಜು ಆಗಿಲ್ಲ ಮತ್ತು 18 ಕೆಲಸಗಳನ್ನು ಇನ್ನೂ ಪ್ರಾರಂಭ ಮಾಡಿಲ್ಲಾ. ಹಾಗೆಯೇ ಚಿಕ್ಕಮಗಳೂರು ಜಿಲ್ಲೆ ತೆಗೆದುಕೊಂಡರೆ ಅಲ್ಲಿ 50 ಕೆಲಸಗಳಿಗೆ ಅಂದಾಜು ಆಗಿಲ್ಲಾ ಮತ್ತು 40 ಕೆಲಸಗಳನ್ನು ಇನ್ನೂ ಪ್ರಾರಂಭ ಮಾಡಿಲ್ಲಾ. ಹಾಗೆಯೇ ಹಾಸನ ಜಿಲ್ಲೆ ತೆಗೆದುಕೊಂಡರೆ ಅಲ್ಲಿ 5 ಕೆಲಸಗಳಿಗೆ ಅಂದಾಜು ಆಗಿಲ್ಲಾ ಮತ್ತು 5 ಕೆಲಸಗಳನ್ನು ಇನ್ನೂ ಪ್ರಾರಂಭ ಮಾಡಿಲ್ಲಾ. ಇದುವರೆಗೂ ಈ ಕೆಲಸಗಳನ್ನು ಆಗದೇ ಇರುವುದಕ್ಕೆ ಅಂಥಾ ಪ್ರಬಲವಾದ ಕಾರಣಗಳೇನು ಸ್ವಾಮಿ?

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈಗ ಅವರ ಬಗ್ಗೆ ತನಿಖೆ ನಡೆದು ಸೂಪರಿಂಟೆಂಡೆಂಟ್ ಇಂಜಿನಿಯರ್ ರಿಪೋರ್ಟ್ ಕೂಡ ಬಂದಿದೆ. ಅದು ಬರುವುದು ವಿಳಂಬವಾಗಿದ್ದರಿಂದ ಸ್ವಲ್ಪ ನಿಧಾನವಾಗಿದೆ. ಈಗ ಆ ಎಲ್ಲಾ ಕೆಲಸಗಳನ್ನೂ ಮಂಜೂರು ಮಾಡಿ ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಕೆಲಸಗಳೆಲ್ಲಾ ಬಜೆಟೆಡ್ ವರ್ಕ್‌ನಲ್ಲಿ ಸೇರಿವೆ. ಹಾಗೂ ಇದು 1976-77 ರ ಪ್ರೋಗ್ರಾಂ ಲಿಸ್ಟ್‌ನಲ್ಲಿ ಸೇರಿದೆ. ನಾನು ಕೇಳುವುದು ಏನೆಂದರೆ ಪ್ರೋಗ್ರಾಂ ಲಿಸ್ಟ್‌ನಲ್ಲಿ ಈ ಕೆಲಸಗಳನ್ನು ಸೇರಿಸುವುದಕ್ಕೆ ಮುಂಚೆ ಪ್ರಿಲಿಮಿನರಿಯಾಗಿ ಇನ್‌ವೆಸ್ಟಿಗೇಷನ್ ಮಾಡಿಸಿ ಇದನ್ನು ಸಿದ್ಧಪಡಿಸುವುದಿಲ್ಲವೆ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ ಶಿವಮೊಗ್ಗಾ ಸರ್ಕಲ್‌ನಲ್ಲಿ 1976-77 ರ ಬಡ್ಜೆಟ್ ವರ್ಕ್‌ನಲ್ಲಿ 3 ಕೋಟಿ 5 ಲಕ್ಷ 44 ಲಕ್ಷ ರೂಪಾಯಿ ಇದೆ. ಅದರಲ್ಲಿ ಫೆಬ್ರುವರಿ ಕೊನೆಯವರೆಗೆ 2 ಕೋಟಿ 51 ಲಕ್ಷ ರೂಪಾಯಿ ಅಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಕೆಲವು ಕೆಲಸಗಳು ಸಾಧ್ಯವಿರುವುದನ್ನು ಮಾಡಿದ್ದೇವೆ. ಇನ್ನು ಕೆಲವು ಕೆಲಸಗಳು ಫೀಸಿಬಲ್ ಇಲ್ಲದೇ ಇರುವುದಕ್ಕೆ ಪುನಃ ಅಂದಾಜು ಮಾಡಿಸಿ ಮತ್ತೆ ಒಂದು ವರದಿ ಬರಬೇಕಾಗಿರುತ್ತೆ. ಅದು ಬಂದ ನಂತರ ಆ ಕೆಲಸಗಳನ್ನೂ ಕೂಡ ಪ್ರಾರಂಭಮಾಡಲು ಕ್ರಮ ಕೈಗೊಳ್ಳಲಾಗುವುದು.

---

* Both the Statements are placed in the Karnataka *Legislative* Library *Vide* No. 40/7-7-77.

ಶ್ರೀ ಕಾಗೋಡು ತಿಮ್ಮಪ್ಪ.—ಸ್ಟೇಟ್‌ಮೆಂಟ್ ಒಂದರಲ್ಲಿ 1976-77ಕ್ಕೆ ಅಂತಿಮವಾಗಿ ಎಷ್ಟು ಹಣ ಖರ್ಚು ಮಾಡಿದ್ದೀರಿ ಅನ್ನುವ ಬಗ್ಗೆ ನಮಗೆ ಒಂದು ಪಟ್ಟಿಯನ್ನು ಕೊಟ್ಟಿದ್ದೀರಿ. ಅದರಲ್ಲಿ ಕೆಲವು ಜಿಲ್ಲೆಗಳನ್ನು ಪರಿಶೀಲನೆ ಮಾಡುವುದಾದರೆ ಕೆಲವು ತಾಲ್ಲೂಕುಗಳಿಗೆ ಹೆಚ್ಚು ಹಣವನ್ನು ಒದಗಿಸಿದ್ದೀರಿ ಇನ್ನು ಕೆಲವು ತಾಲ್ಲೂಕುಗಳಿಗೆ ಕಡಿಮೆ ಹಣವನ್ನು ಒದಗಿಸಿದ್ದೀರಿ. ಇದರಿಂದ ತಾವು ಒಂದು ಇಂಬ್ಯಾಲೆನ್ಸ್ ಕ್ರಿಯೇಟ್ ಮಾಡಿದಂತಾಗುವುದಿಲ್ಲವೇ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಲೆನಾಡು ಭಾಗದಲ್ಲಿ ಸರ್ಕಾರ ಯಾವ ರೀತಿಯಾಗಿಯೂ ತಾರತಮ್ಯ ತೋರಿಸಿಲ್ಲಾ. ನಿಮ್ಮ ಭಾಗದಲ್ಲಿ ಏನಾಗಿದೆ ಎಂದರೆ ಅಲ್ಲಿ ಸಣ್ಣ ನೀರಾವರಿ ಕೆಲಸಗಳು ಹೆಚ್ಚು ಮಾಡುವುದಕ್ಕೆ ಸಾಧ್ಯವಿದೆ, ದೊಡ್ಡ ಕೆಲಸಗಳನ್ನು ಮಾಡುವುದಕ್ಕೆ ಅವಕಾಶ ಕಡಿಮೆ ಇದೆ ಆದುದರಿಂದ ಸಣ್ಣಪುಟ್ಟ ಕೆಲಸಗಳನ್ನು ಅಲ್ಲಿ ಮಾಡಿದ್ದಾವೆ ಮತ್ತು ನಿಮ್ಮ ಭಾಗದಲ್ಲಿ ಇರತಕ್ಕಂಥಾ ಎಲ್ಲಾ ಕೆಲಸಗಳಿಗೂ ಕೂಡ ಮಂಜೂರಾಗಿದೆ ಮತ್ತು ಆ ಎಲ್ಲಾ ಕೆಲಸಗಳನ್ನೂ ಕೂಡ ಈ ಸಾರಿ ಪ್ರಾರಂಭ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ತಾರತಮ್ಯ ತೋರಿಸಿಲ್ಲಾ ಎಂದು ಹೇಳುತ್ತೀರಿ. ಶಿವಮೊಗ್ಗಾ ಡಿವಿಷನ್ ತೆಗೆದುಕೊಂಡರೆ ಅಲ್ಲಿಗೆ 3 ತಾಲ್ಲೂಕುಗಳು ಸೇರಿದೆ ಅದರಲ್ಲಿ ಎರಡು ತಾಲ್ಲೂಕುಗಳಿಗೆ ಹೆಚ್ಚು ಕೆಲಸ ಮಾಡಿದ್ದೀರಿ, ಇದು ತಾರತಮ್ಯ ಅಲ್ಲವೇ? ಮತ್ತು ಇನ್ನೂ 30-35 ಕೆಲಸಗಳಿಗೆ ಎಸ್ಟಿಮೇಟ್ ಆಗಿ ಅದನ್ನು ಮಂಜೂರು ಮಾಡುವುದಕ್ಕೆ ಎಕ್ಸಿಕ್ಯೂಟೀವ್ ಇಂಜಿನೀಯರ್ ಅವರ ಟೀಬಲ್ ಮೇಲೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ತಾರತಮ್ಯ ತೋರಿಸಿಲ್ಲಾ ಎಂದು ಹೇಳಿದ್ದೀರಿ. ಉದಾಹರಣೆಗೆ ಶಿವಮೊಗ್ಗಾ ತಾಲ್ಲೂಕಿನಲ್ಲಿ 25 ಲಕ್ಷ ರೂಪಾಯಿ ಹಣ ಖರ್ಚು ಮಾಡಿದ್ದೀರಿ, ಅದೇ ಭದ್ರಾವತಿಯಲ್ಲಿ 3 ಲಕ್ಷ 62 ಸಾವಿರ ರೂಪಾಯಿ ಹಣ ಖರ್ಚು ಮಾಡಿದ್ದೀರಿ. ಇದು ತಾರತಮ್ಯ ವಲ್ಲವೇ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಶಿವಮೊಗ್ಗಾ ತಾಲ್ಲೂಕಿನಲ್ಲಿ ಎಷ್ಟು ನೀರಾವರಿ ಇದೆ, ಭದ್ರಾವತಿ ತಾಲ್ಲೂಕಿನಲ್ಲಿ ಎಷ್ಟು ನೀರಾವರಿ ಇದೆ ಅನ್ನುವುದನ್ನು ಮಾನ್ಯ ಸದಸ್ಯರು ಲೆಕ್ಕಾಚಾರ ಹಾಕಿಕೊಂಡರೆ ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಅದನ್ನೆಲ್ಲಾ ಲೆಕ್ಕಾಚಾರ ಹಾಕಿಕೊಂಡೇ ಹೇಳಿದ್ದೇನೆ. ತಮಗೆ ಹೇಳಬೇಕಾದರೆ ತೀರ್ಥಹಳ್ಳಿಗೆ 9 ಲಕ್ಷ, ಸೊರಬಾಕ್ಕೆ 7 ಲಕ್ಷ, ಶಿಕಾರಿಪುರಕ್ಕೆ 7 ಲಕ್ಷ ರೂಪಾಯಿ ಕೊಟ್ಟಿದ್ದೀರಲ್ಲಾ ಇದು ಇಂಬ್ಯಾಲೆನ್ಸ್ ಕ್ರಿಯೇಟ್ ಮಾಡಿದ ಹಾಗಾಗುವುದಿಲ್ಲವೇ? ಈಗ ಮೊನ್ನೆತಾನೇ ಈ ಸಣ್ಣ ನೀರಾವರಿ ಯೋಜನೆಗೆ 15 ಕೋಟಿ ರೂಪಾಯಿನ ಒಂದು ಯೋಜನೆ ಮಾಡಿದ್ದೇವೆ ಅಂತ ಹೇಳಿದಿರಿ ಈವಾಗ ನೀವು ಹಣ ಹಂಚಿತಕ್ಕಂಥಾದ್ದನ್ನು ನೋಡಿದರೆ ಸಣ್ಣ ನೀರಾವರಿ ಬಗ್ಗೆ ನಮ್ಮ ಮಲೆನಾಡನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದೀರಿ ತೀರ್ಥಹಳ್ಳಿ ಹೊಸನಗರ ಮತ್ತು ಸಾಗರ ತಾಲ್ಲೂಕ್ ತೆಗೆದುಕೊಂಡರೆ ಹಣ ಒದಗಿಸಿರುವುದು ಬಹಳಷ್ಟು ವ್ಯತ್ಯಾಸ ಕಾಣುತ್ತದೆ. ಹಾಸನ ಜಿಲ್ಲೆಗೂ ನಮ್ಮ ಜಿಲ್ಲೆಗೂ ಹಣ ಒದಗಿಸಿರುವುದನ್ನು ನೋಡಿ, ದರೂ ಕೂಡ ಬಹಳ ವ್ಯತ್ಯಾಸ ಇದೆ. ಈ ರೀತಿ ಮಾಡಿದರೆ ಇಂಬ್ಯಾಲೆನ್ಸ್ ಕ್ರಿಯೇಟ್ ಮಾಡಿದಂತಾಗುವುದಿಲ್ಲವೇ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಹೊಸ ಕೆಲಸಗಳನ್ನು ಮಂಜೂರಾತಿ ನೀಡುವಾಗ Spillover works plus fresh works should not exceed Rs. 250 lakhs ಅನ್ನುವ ಒಂದು ಆಧಾರವನ್ನು ನಾವು ಇಟ್ಟುಕೊಂಡಿದ್ದೇವೆ. ಅದರಂತೆ ನಾವು ಈ ಹಣವನ್ನು ಎಲ್ಲಾ ಜಿಲ್ಲೆಗಳಿಗೆ ನಮ್ಮಭಾಗವಾಗಿ ಹಂಚಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ —ಈಗಾಗ ತಾವು ಈ ಸಣ್ಣ ನೀರಾವರಿ ಯೋಜನೆಗೆ 15 ಕೋಟಿ ರೂಪಾಯಿನ ಒಂದು ಯೋಜನೆಯನ್ನು ಸಿದ್ಧಪಡಿಸಿದ್ದೀರಿ. ಅವೆಲ್ಲವನ್ನೂ ಪರಿಶೀಲನೆ ಮಾಡಿನ್ನೇವೆ ಅವರು ನಮಗೆ ಕಣ್ಣಿಗೆಕಾಣುವ ರೀತಿಯಲ್ಲಿ ನ ಕಷ್ಟು ಪ್ರಮಾಣದಲ್ಲಿ ಈ ಕೆಲಸಗಳನ್ನು ಸೇರಿಸಿರಾ ನಾವು ಈ ಬಗ್ಗೆ ಒಂದು ಪಟ್ಟಿಯನ್ನು ಕೊಟ್ಟರೆ ಅದಕ್ಕೆ ಆದ್ಯತೆ ಕೊಟ್ಟು ಆ ಕೆಲಸಗಳನ್ನು ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನಾನು ಮೊದಲೇ ಹೇಳಿದ ಹಾಗೆ ಸ್ಪಿಲ್‌ಓವರ್ ವರ್ಕ್ಸ್ ಮತ್ತು ಹೊಸ ಕೆಲಸಗಳು ಈ ಎರಡು ಸೇರಿ 250 ಲಕ್ಷ ರೂಪಾಯಿಗಳ ಮೇಲೆ ಆಗಕೂಡದು ಅನ್ನುವ ಒಂದು ಫಾರ್ಮುಲಾ ಇವೆ ಆ ಫಾರ್ಮುಲಾ ಪ್ರಕಾರ ಅಲ್ಲಿ 250 ಲಕ್ಷ ರೂಪಾಯಿಗಳ ಕೆಲಸಕ್ಕೆ 100 ಲಕ್ಷ ರೂಪಾಯಿಗಳಷ್ಟು ಕೆಲಸವನ್ನು ಸೇರಿಸಬಹುದು. ಎಷ್ಟು ಸಾಧ್ಯವೋ ಅಷ್ಟನ್ನು ಸೇರಿಸಬಹುದು.

ಶ್ರೀ ಕಾಗೋಡು ತಿಮ್ಮಪ್ಪ —ನೀವು ಈಗ ಈ ಸಣ್ಣ ನೀರಾವರಿ ಯೋಜನೆಗೆ 15 ಕೋಟಿ ರೂಪಾಯಿನ ಒಂದು ಯೋಜನೆ ಏನು ಮಾಡಿದ್ದೀರೋ ಅದು it is outside the normal budget under the minor ir igation scheme.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಎಲ್ಲ ಕೆಲಸಗಳನ್ನು ಪ್ಲಾನ್ ಪ್ರೊವಿಜನಿನಲ್ಲಿ ಸಿಗದಿ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ಒಂದು ಫಾರ್ಮುಲಾ ಪ್ರಕಾರ ಹಾಸನ ಜಿಲ್ಲೆಗೆ ಅರ್ಧ ದಷ್ಟು ಆದರೂ ಹಣ ಬರಬೇಕಲ್ಲಾ.

ಶ್ರೀ ಡಿ. ದೇವರಾಜ ಅರಸ್ —ಮಾನ್ಯ ಸದಸ್ಯರು ಎಲ್ಲಿಯಾದರೂ ಅನ್ಯಾಯವಾಗಿದೆ ಅನ್ನುವುದನ್ನು ತೋರಿಸಿ ಕೊಟ್ಟರೆ ಅದರ ಬಗ್ಗೆ ತನಿಖೆ ಮಾಡಿಸಬೇಕು ಅಂತ ಹೇಳಿದರೆ, ಅದನ್ನು ನಾನು ಒಪ್ಪುತ್ತೇನೆ.

## Transfer of funds of defunct Taluk Development Associations

325. SRI B. M. HORAKERI (Guledgud)—Will the Minister for Co-operation be pleased to state.—

(*a*) whether it is not a fact that in every taluk of Bijapur, Belgaum, Dharwar and Karwar (N.K.) Districts, the TDAs have been registered under the provisions of co-operative Societies Act ;

(*b*) the nature of powers and functions assigned to these T.D. As in these Taluks;

(*c*) whether, it has come to the notice of Government that these institutions (*i e.* TDAs) have become redudant owing to the fact that the same activities are being c rried out by the Community Development and National Extension Services Blocks in these Taluks;

(*d*) whether Government has any proposal before it to liquidate these defunct TDAs and tran·fer their funds to other insti utions/organisations carrying out developmental activities in those taluks?

SRI K. H. RANGANATH (Minister for Co-operation).—

(*a*) Yes, b t not in every taluk.